ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 610

ಸದಸ್ಯರ ಹೆಸರು : ಶ್ರೀ ಎಸ್. ನಾಗರಾಜ್ (ಸಂದೇಶ ನಾಗರಾಜ್)

ಉತ್ತರಿಸಬೇಕಾದ ದಿನಾಂಕ : 05.03.2021

ಉತ್ತರಿಸುವವರು : ಮಾನ್ಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ.	ನಾಗನಹಳ್ಳಿ ರೈಲ್ವೆ ಟರ್ಮಿನಲ್ ಕಾಮಗಾರಿಯ ಉದ್ಘಾಟನೆ ಯಾವಾಗ ನಡೆಯಿತು; ಈ ಯೋಜನೆಗೆ ಅಗತ್ಯವಾದ ಭೂಮಿ ಎಷ್ಟು; ಹಾಗೂ ಭೂಮಿ ಸ್ವಾಧೀನಕ್ಕೆ ಇದುವರೆಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ನಾಗನಹಳ್ಳಿ ರೈಲ್ವೆ ಟರ್ಮಿನಲ್ ಕಾಮಗಾರಿಯ ಉದ್ಘಾಟನೆ ಆಗಿರುವುದಿಲ್ಲ. ಈ ಯೋಜನೆಗೆ ಒಟ್ಟು 66.77 ಹೆಕ್ಟೇರ್ ಭೂಮಿ ಅಗತ್ಯವಿದೆ. ಈ ಕಾಮಗಾರಿಯು ರೈಲ್ವೆ ಇಲಾಖೆಯ ಕಾಮಗಾರಿಯಾಗಿದ್ದು, ರಾಜ್ಯ ಸರ್ಕಾರದಿಂದ ಯಾವುದೇ ಕ್ರಮವಹಿಸಿಲ್ಲ.
ಆ.	ಈ ಯೋಜನೆಗೆ ಕೇಂದ್ರದಿಂದ ಬಿಡುಗಡೆಯಾಗಿರುವ ಅನುದಾನ ಎಷ್ಟು; ರಾಜ್ಯ ಸರ್ಕಾರ ಮ್ಯಾಚಿಂಗ್ ಗ್ರಾಂಟ್ ನೀಡಬೇಕಾಗಿದಿಯೇ; ಮ್ಯಾಚಿಂಗ್ ಗ್ರಾಂಟ್ ನೀಡಬೇಕಾದಲ್ಲಿ ಅದನ್ನು ನೀಡಲು ಹಾಗೂ ಭೂಸ್ವಾಧೀನ ಪಡಿಸಿಕೊಂಡು ಈ ಕಾಮಗಾರಿಯನ್ನು ಬೇಗ ಪ್ರಾರಂಭಿಸಿ ಮುಕ್ತಾಯವಾಗಲು ಜರುಗಿಸಲಿರುವ ಕ್ರಮಗಳೇನು?	ಕೇಂದ್ರ ಸರ್ಕಾರದಿಂದ 2020-21ನೇ ಸಾಲಿನ ಆಯವ್ಯಯದಲ್ಲಿ ರೂ. 8.00 ಕೋಟಿ ಬಿಡುಗಡೆ ಮಾಡಲಾಗಿದೆ. 2021-22ನೇ ಸಾಲಿನ ಆಯವ್ಯಯದಲ್ಲಿ ರೂ.19.99 ಗಳನ್ನು ನಿಗಧಿಪಡಿಸಲಾಗಿದೆ. ಈ ಯೋಜನೆಯ ವಿಸ್ತೃತವರದಿಗೆ (ಡಿಪಿಆರ್) ರೈಲ್ವೆ ಮಂತ್ರಾಲಯದ ಸಿಸಿಇಎಯಿಂದ ಅನುಮೋದನೆ ದೊರೆತಿರುವುದಿಲ್ಲವೆಂದು ನೈರುತ್ಯ ರೈಲ್ವೆ ಇಲಾಖೆಯು ತಿಳಿಸಿರುತ್ತದೆ. ಅನ್ವಯಿಸುವುದಿಲ್ಲ.

ಸಂಖ್ಯೆ: ಮೂಅಇ 41 ರಾರಾಹೆ 2021/ಇ

(ಆನಂದ ಸಿಂಗ್)

ಮೂಲಸೌಲಭ್ಯ ಅಭಿವೃದ್ಧಿ, ವಕ್ಫ್ ಮತ್ತು ಹಜ್ ಸಚಿವರು